# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1915
ಸದಸ್ಯರ ಹೆಸರು : ಶ್ರೀ ಮಧು ಜಿ. ಮಾದೇಗೌಡ
(ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು)
ಉತ್ತರಿಸ ಬೇಕಾದ ದಿನಾಂಕ : 24.03.2026
ಉತ್ತರಿಸುವ ಸಚಿವರು : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರೈತರ ಹಿತಕಾಯಲು ಮತ್ತು ತೂಕದಲ್ಲಾಗುವ ಮೋಸವನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯದ 11 ಸ್ಥಳಗಳಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ 'ಡಿಜಿಟಲ್ ವೇಬ್ರಿಡ್ಜ್' (Digital Weighbridge) ಪ್ರಗತಿ ಪ್ರಸ್ತುತ ಯಾವ ಹಂತದಲ್ಲಿದೆ ; (ವಿವರವಾದ ಮಾಹಿತಿ ನೀಡುವುದು) | ರೈತರ ಹಿತಕಾಯಲು ಮತ್ತು ತೂಕದಲ್ಲಾಗುವ ಮೋಸವನ್ನು ತಡೆಗಟ್ಟುವ ನಿಟ್ಟಿನಲ್ಲಿ ರಾಜ್ಯದಲ್ಲಿ ಸ್ಥಾಪಿಸಲು ಉದ್ದೇಶಿಸಿದ್ದ 'ಡಿಜಿಟಲ್ ವೇಬ್ರಿಡ್ಜ್' (Digital Weigh bridge) ಪ್ರಗತಿಯ ಪ್ರಸ್ತುತ ಹಂತದ ಮಾಹಿತಿ ಯನ್ನು **ಅನುಬಂಧ**ದಲ್ಲಿ ಒದಗಿಸಿದೆ.<br><br>ಸದರಿ ಕಾಮಗಾರಿಗಳನ್ನು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಸ್ವಂತ ನಿಧಿಯಿಂದ ಭರಿಸಲಾಗುತ್ತದೆ. |
| ಆ) | ಎಷ್ಟು ಮೊತ್ತದಲ್ಲಿ ಪ್ರತಿ ಸ್ಥಳದಲ್ಲಿ 'ಡಿಜಿಟಲ್ ವೇಬ್ರಿಡ್ಜ್' ಸ್ಥಾಪಿಸಲಾಗುತ್ತಿದೆ; ಇವುಗಳ ಸಾಮರ್ಥ್ಯ (ತೂಕ ಅಳೆಯುವ ಪ್ರಮಾಣ) ಎಷ್ಟು; ಇದಕ್ಕಾಗಿ ಒಟ್ಟು ಎಷ್ಟು ಅನುದಾನವನ್ನು ಒದಗಿಸಲಾಗಿದೆ; | |
| ಇ) | 'ಡಿಜಿಟಲ್ ವೇಬ್ರಿಡ್ಜ್'ಗಳ ಸ್ಥಾಪನೆ ಕಾರ್ಯ ಮಂದಗತಿ ಯಲ್ಲಿ ಸಾಗಿದ್ದು, ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರದ ಕ್ರಮಗಳೇನು; | ಡಿಜಿಟಲ್ ವೇಬ್ರಿಡ್ಜ್ ಗಳ ಸ್ಥಾಪನೆಯ ಕುರಿತಂತೆ, 03 ಸ್ಥಳಗಳಲ್ಲಿ ಕಾಮಗಾರಿಗಳು ಪ್ರಗತಿಯಲ್ಲಿದ್ದು, 05 ಸ್ಥಳಗಳ ಕಾಮಗಾರಿಗಳಿಗೆ ಕಾರ್ಯಾದೇಶ ನೀಡಲಾಗಿದೆ. ಸದ್ಯದಲ್ಲಿಯೇ ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು. ಇನ್ನುಳಿದ 02 ಸ್ಥಳಗಳ ಕಾಮಗಾರಿಗಳಿಗೆ ಟೆಂಡರ್ ಕರೆಯಲಾಗಿದ್ದು, ತ್ವರಿತಗತಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತದೆ. ವಿವರ ಅನುಬಂಧದಲ್ಲಿ ಒದಗಿಸಿದೆ. |
| ಈ) | ರೈತರಿಗೆ ಅನುಕೂಲ ಕಲ್ಪಿಸುವ ಸಂಬಂಧ ರಾಜ್ಯದಾದ್ಯಂತ ಇನ್ನಿತರ ಸ್ಥಳಗಳಲ್ಲೂ 'ಡಿಜಿಟಲ್ ವೇಬ್ರಿಡ್ಜ್' ಸ್ಥಾಪಿಸುವ ಕುರಿತು ಸರ್ಕಾರದ ನಿಲುವೇನು? | ಪ್ರಥಮ ಹಂತದಲ್ಲಿ ಅನುಬಂಧದಲ್ಲಿ ವಿವರಿಸಿರುವಂತೆ, ಬೆಳಗಾವಿ, ಬಾಗಲಕೋಟೆ, ಮಂಡ್ಯ, ಚಾಮರಾಜನಗರ ಮತ್ತು ವಿಜಯಪುರ ಜಿಲ್ಲೆಗಳಲ್ಲಿ ಡಿಜಿಟಲ್ ವೇ-ಬ್ರಿಡ್ಜ್ ಗಳ ಸ್ಥಾಪನೆಗೆ ಕ್ರಮವಹಿಸಲಾಗಿದೆ.<br>ಸದರಿ ಯೋಜನೆಯ ಫಲಶ್ರುತಿ ಆಧಾರದ ಮೇಲೆ ಹಾಗೂ ಇನ್ನಿತರ ಸ್ಥಳಗಳಲ್ಲಿನ ಬೇಡಿಕೆಗನುಗುಣವಾಗಿ ಮುಂದಿನ ದಿನಗಳಲ್ಲಿ ಪರಿಶೀಲಿಸಲಾಗುವುದು. |

**ಸಂಖ್ಯೆ: ಸಿಒ 121 ಎಂಆರ್‌ಇ 2026**

**(ಶಿವಾನಂದ ಎಸ್. ಪಾಟೀಲ)**
**ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ**
**ಹಾಗೂ ಕೃಷಿ ಮಾರುಕಟ್ಟೆ ಸಚಿವರು**

12134118/2026/O/O USI-CO

# ಅನುಬಂಧ

## ಡಿಜಿಟಲ್ ವೇ-ಬ್ರಿಡ್ಜ್ ಪ್ರಗತಿಯ ಪ್ರಸ್ತುತ ಹಂತ

| ಕ್ರ. ಸಂ. | ಜಿಲ್ಲೆಯ ಹೆಸರು | ಕಾಮಗಾರಿಯ ಸ್ಥಳ | ಸಾಮರ್ಥ್ಯ (ಮ.ಟನ್ ಗಳಲ್ಲಿ) | ಟೆಂಡರ್ ಮೊತ್ತ (ರೂ. ಲಕ್ಷಗಳಲ್ಲಿ) | ಪ್ರಗತಿಯ ಹಂತ |
|---|---|---|---|---|---|
| 1 | ಬೆಳಗಾವಿ | ಬೆಳಗಾವಿ-ಹಿರೇಬಾಗೇವಾಡಿ ಉಪ ಮಾರುಕಟ್ಟೆ ಪ್ರಾಂಗಣ | 80 | 63.82 | ಕಾಮಗಾರಿ ಮುಗಿಯುವ ಹಂತದಲ್ಲಿದೆ |
| 2 | ಬಾಗಲಕೋಟೆ | ಮುಧೋಳ- ಕೃಷಿ ವಿಶ್ವವಿದ್ಯಾಲಯ ಜಾಗ | 80 | 77.88 | ಕಾರ್ಯಾದೇಶ ನೀಡಲಾಗಿದೆ |
| 3 | ಬೆಳಗಾವಿ | ಯರಗಟ್ಟಿ ಮುಖ್ಯ ಮಾರುಕಟ್ಟೆ ಪ್ರಾಂಗಣ | 80 | 50.57 | ಕಾಮಗಾರಿ ಪ್ರಗತಿಯಲ್ಲಿದೆ |
| 4 | ಬಾಗಲಕೋಟೆ | ಬದಾಮಿ-ಕೆರೂರು ಉಪ ಮಾರುಕಟ್ಟೆ ಪ್ರಾಂಗಣ | 80 | 53.19 | ಕಾಮಗಾರಿ ಪ್ರಗತಿಯಲ್ಲಿದೆ |
| 5 | ಬಾಗಲಕೋಟೆ | ಮಹಾಲಿಂಗಪುರ -ಮುಖ್ಯ ಮಾರುಕಟ್ಟೆ ಪ್ರಾಂಗಣ | 80 | 52.67 | ಕಾರ್ಯಾದೇಶ ನೀಡಲಾಗಿದೆ |
| 6 | ಬೆಳಗಾವಿ | ಬೈಲಹೊಂಗಲ- ನೇಸರಗಿ ಉಪ ಮಾರುಕಟ್ಟೆ ಪ್ರಾಂಗಣ | 80 | 51.67 | ಕಾರ್ಯಾದೇಶ ನೀಡಲಾಗಿದೆ |
| 7 | ಮಂಡ್ಯ | ಮದ್ದೂರು - ಗುಡಿಗೆರೆ ಉಪ ಮಾರುಕಟ್ಟೆ ಪ್ರಾಂಗಣ | 80 | 51.91 | ಕಾರ್ಯಾದೇಶ ನೀಡಲಾಗಿದೆ |
| 8 | ಚಾಮರಾಜನಗರ | ಕೊಳ್ಳೇಗಾಲ - ಚಿಲಕವಾಡಿ ಗ್ರಾಮ | 80 | 67.84 | ಕಾರ್ಯಾದೇಶ ನೀಡಲಾಗಿದೆ |
| 9 | ವಿಜಯಪುರ | ಅಲಮೇಲ ಮುಖ್ಯ ಮಾರುಕಟ್ಟೆ ಪ್ರಾಂಗಣ | 80 | 51.32 | ಟೆಂಡರ್ ಕರೆಯಲಾಗಿದೆ. |
| 10 | ವಿಜಯಪುರ | ವಿಜಯಪುರ- ಕೊಲ್ಹಾರ ಉಪ ಮಾರುಕಟ್ಟೆ ಪ್ರಾಂಗಣ | 80 | 51.32 | ಟೆಂಡರ್ ಕರೆಯಲಾಗಿದೆ. |

ನಿರ್ದೇಶಕರು